ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2019–20** **ದಿನಾಂಕ: 12–06–2019**

## ಪತ್ರಿಕಾ ಆಮಂತ್ರಣ

1. **ಶ್ರೀ ಜಗದೀಶ್ ಹಿರೇಮಣಿ, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯರು, ನವದೆಹಲಿ ಇವರಿಂದ ಕೆ. ಜಿ. ಹಳ್ಳಿಯಲ್ಲಿ ಕಾರ್ಮಿಕರು ರೊಚ್ಚು ತೊಟ್ಟಿಯನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಟ್ಟ ಸ್ಥಳಕ್ಕೆ ಹಾಗೂ ರಸ್ತೆ ಅಪಘಾತದಲ್ಲಿ ಮೃತಪಟ್ಟ ಶ್ರೀಮತಿ ಅಂಡಳಮ್ಮ, ಪೌರಕಾರ್ಮಿಕರ ಮನೆಗೆ ಭೇಟಿ ನೀಡಲಿದ್ದಾರೆ.**

   **ದಿನಾಂಕ: 13–06–2019, ಗುರುವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ ಕೆ.ಜಿ.ಹಳ್ಳಿಯಲ್ಲಿ ಮೃತಪಟ್ಟ ಕಾರ್ಮಿಕನ ಮನೆಗೆ ಭೇಟಿ.**

   **ದಿನಾಂಕ: 13–06–2019, ಗುರುವಾರ ಸಮಯ : ಸಂಜೆ 4–00 ಗಂಟೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ಪೌರಕಾರ್ಮಿಕ ಶ್ರೀಮತಿ ಅಂಡಳಮ್ಮರವರ ಮನೆಗೆ ಭೇಟಿ.**

### ಪತ್ರಿಕಾ ಪ್ರಕಟಣೆ

# ಪ್ರತಿ ತಿಂಗಳ ನಾಲ್ಕನೇ ಶನಿವಾರವೂ ಸರ್ಕಾರಿ ಕಚೇರಿಗಳಿಗೆ ಸಾರ್ವತ್ರಿಕ ರಜೆ

ಬೆಂಗಳೂರು ಜೂನ್ 12 (ಕರ್ನಾಟಕ ವಾರ್ತೆ)

**ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳ ನಾಲ್ಕನೇ ಶನಿವಾರವು ಸರ್ಕಾರಿ ಕಚೇರಿಗಳಿಗೆ ಸಾರ್ವತ್ರಿಕ ರಜೆ ಎಂದು ಘೋಷಿಸಿದೆ ಮತ್ತು ಪ್ರಸ್ತುತ ರಾಜ್ಯ ಸರ್ಕಾರಿ ನೌಕರರಿಗೆ**

**ಇರುವ ಹದಿನೈದು ದಿವಸಗಳ ಸಾಂದರ್ಭಿಕ ರಜೆಯನ್ನು ಹತ್ತು ದಿವಸಗಳಿಗೆ ಇಳಿಸಲಾಗಿದೆ ಎಂದು ಆದೇಶ ಹೊರಡಿಸಿದೆ.**

## ಬೆವಿಕಂ ಗ್ರಾಹಕ ಸಂವಾದ ಸಭೆ

ಬೆಂಗಳೂರು ಜೂನ್ 12 (ಕರ್ನಾಟಕ ವಾರ್ತೆ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಉಪವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಮಧ್ಯಾಹ್ನ 3:00 ರಿಂದ ಸಂಜೆ 5:30 ರವರೆಗೆ ಗ್ರಾಹಕ ಸಂವಾದ ಸಭೆಗಳನ್ನು ನಡೆಸಲಾಗುತ್ತಿದೆ. ಸದರಿ ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದಾಗಿದೆ.

ಈ ತಿಂಗಳ ಗ್ರಾಹಕ ಸಂವಾದ ಸಭೆ ದಿನಾಂಕ 15.06.2019 ರಂದು ಬೆವಿಕಂನ ಎಲ್ಲಾ ಉಪವಿಭಾಗಗಳಲ್ಲಿ ನಡೆಯಲಿದ್ದು, ಗ್ರಾಹಕರು ಈ ಸಭೆಯ ಸದುಪಯೋಗ ಪಡೆಯಬೇಕಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಪ್ರಧಾನ ವ್ಯವಸ್ಥಾಪಕ(ಗ್ರಾ.ಸಂ.) ಹೆಚ್. ಎಂ. ಶಿವಪ್ರಕಾಶ್ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## BESCOM Customer Interaction Meeting

**Bengaluru, June 12, (Karnataka Information)**

Customer Interaction Meetings (CIM) are being conducted at all Sub Divisions of BESCOM on third Saturday of every month from 3.00pm to 5.30pm. Customers are requested to attend the

meeting and get their electricity related issues resolved by having one to one interaction with concerned BESCOM official.

In this regard Customer Interaction Meeting for the month of June the scheduled on 15.06.2019. In this regard all the esteemed consumers are requested to participate and make use of the opportunity in redressal of complaints says official press release

*****

The following clarifications are given with regard to the Newspaper Reports appeared on 11th June 2019 stating that farmers in the State are protesting the Proposed Amendments to the Land Acquisition Act, 2013.

1) This Amendment is proposed to exempt certain Government infrastructure projects such as Irrigation, Drinking Water Projects, Electrification and PPP Projects where the ownership of land continues to vest with the State Government from Social Impact Assessment (SIA) in order to avoid inordinate delay while implementing the projects of public importance.

2) The compensation will be paid as per the Original Land Acquisition Act, 2013. There is no question of alteration OR reduction of compensation payable to the land losers. The land losers will get the same compensation as prescribed in the Land Acquisition Act, 2013.

3) It also proposes that if at any stage of proceedings, the Deputy Commissioner is satisfied that the persons interested in the land have agreed in writing on the matters to be included in the Award,

then the Deputy Commissioner may without making further enquiry make an Award according to the terms of such Agreement.

4) As stated in the Report that there is no Price Fixation Committee headed by the Deputy Commissioner as per the provisions of the Original Act.

5) It also provides for payment of lumpsum amount In lieu of Rehabilitation & Resettlement as may be prescribed. However, which shall not be abnormally at variance to the disadvantage of the affected family.

6) It also provides for voluntary acquisition of land by the State Government by entering into an Agreement. The same provision exists in the Karnataka Industrial Area Development Board Act also.

7) Moreover, the similar Amendments have also been made in the State of Telangana, Andhra Pradesh, Tamil Nadu, Gujarat, Maharashtra and Jharkhand.

8) The very purpose of this Amendment is to help the Government of India and the State Government in expediting their projects in Sectors of Infrastructure, Irrigation, Drinking Water and other PPP Projects (where the land ownership vests with the Government) by accelerating the land acquisition process without detriment to the interest of the farmers according to the official press release.

*****

ದಿನಾಂಕ:11 ಜೂನ್ 2019 ರಂದು ಪ್ರತಿಕೆಗಳಲ್ಲಿ ಭೂ ಸ್ವಾಧೀನ ಕಾಯಿದೆ, 2013 ಕ್ಕೆ ತಂದಿರುವ ಕೆಲವು ತಿದ್ದುಪಡಿಗಳ ಬಗ್ಗೆ ರೈತರು ಪ್ರತಿಭಟಿಸುತ್ತಿರುವ ಕುರಿತು ಪ್ರಕಟವಾದ ಸುದ್ದಿಯ ಬಗ್ಗೆ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

1. ಕೇಂದ್ರ ಸರ್ಕಾರ ಜಾರಿಗೊಳಿಸಿದ ಭೂ ಸ್ವಾಧೀನ ಕಾಯಿದೆ, 2013 ಕ್ಕೆ ರಾಜ್ಯ ಸರ್ಕಾರವು ಕೆಲವು ತಿದ್ದುಪಡಿಗಳನ್ನು ತಂದು, ಸರ್ಕಾರದ ವಿವಿಧ ಮೂಲ ಸೌಕರ್ಯ, ನೀರಾವರಿ, ಕುಡಿಯುವ ನೀರು, ವಿದ್ಯುತ್ತೀಕರಣ ಹಾಗೂ ಖಾಸಗಿ ಪಾಲುದಾರಿಕೆಯಡಿಯಲ್ಲಿ (ಭೂಮಿಯ ಒಡೆತನವು ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡಿರುವುದು ಮುಂದುವರಿಯುವ) ಕೈಗೊಳ್ಳುವ ಮಹತ್ವಾಕಾಂಕ್ಷೆಯ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡುವ ಮುನ್ನ ಸಾಮಾಜಿಕ ಪರಿಣಾಮ ಅಧ್ಯಯನದಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಈ ಕ್ರಮ ಕೈಗೊಂಡಿದೆ. ಇದರಿಂದ ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗ ಆಗುವುದೆಂದು ನಿರೀಕ್ಷಿಸಲಾಗಿದೆ.
2. ರೈತರಿಗೆ ಭೂ ಪರಿಹಾರವನ್ನು ಮೂಲ ಕಾಯಿದೆ 2013 ರಲ್ಲಿರುವಂತೆಯೆ ಪಾವತಿಸಲಾಗುವುದು. ಪರಿಹಾರ ಪಾವತಿಯಲ್ಲಿ ಯಾವುದೇ ಮಾರ್ಪಾಡು ಅಥವಾ ಪರಿಹಾರ ಮೊತ್ತವನ್ನು ಕಡಿತಗೊಳಿಸುವ ಯಾವುದೇ ಅಂಶಗಳಿರುವುದಿಲ್ಲ.

3. ಭೂ ಸ್ವಾಧೀನ ಪ್ರಕಿಯೆಯ ಯಾವುದೇ ಸಂಧರ್ಭದಲ್ಲಿ, ಭೂ ಸ್ವಾಧೀನಕ್ಕೆ ಒಳಗಾಗುವ ಯಾವುದೇ ಭಾದಿತ ವ್ಯಕ್ತಿ ಅಥವಾ ರೈತರು ಸಂಬಂಧಪಟ್ಟ ಜಿಲ್ಲಾಧಿಕಾರಿಯು ನಿಗದಿ ಪಡಿಸುವ ಭೂ ಪರಿಹಾರ ಮೊತ್ತವನ್ನು ಒಪ್ಪಿಕೊಂಡು, ಒಪ್ಪಿಗೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಯು ಯಾವುದೇ ವಿಚಾರಣೆಯನ್ನು ಕೈಗೊಳ್ಳದೇ ಒಪ್ಪಿಗೆಯ ಷರತ್ತುಗಳನ್ವಯ ಭೂ ಪರಿಹಾರವನ್ನು ನಿಗಧಿಪಡಿಸಬಹುದು.

4. ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಜಿಲ್ಲಾಧಿಕಾರಿಗಳ ನೇತೃತ್ವದ ಯಾವುದೇ ದರ ನಿರ್ಧರಣಾ ಸಮಿತಿಯ ರಚನೆ ಬಗ್ಗೆ ಅವಕಾಶವು ಮೂಲ ಕಾಯಿದೆಯಲ್ಲಿ ಇರುವುದಿಲ್ಲ.

5. ಸದರಿ ಕಾಯಿದೆಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಬದಲಿಗೆ, ನಿಯಮಗಳಲ್ಲಿ ನಿಯಮಿಸಬಹುದಾದ ಒಟ್ಟು ಮೊತ್ತವನ್ನು (ಇಡಿಗಂಟು) ಪಾವತಿ ಮಾಡಲಾಗುವುದು. ಸಾಮಾನ್ಯವಾಗಿ ಈ ಇಡಿಗಂಟು ಮೊತ್ತದ ಪಾವತಿಯು, ಬಾಧಿತ ಕುಟುಂಬಗಳಿಗೆ ಅನಾನುಕೂಲವಾಗುವಷ್ಟು ವ್ಯತ್ಯಾಸವಾಗತಕ್ಕದ್ದಲ್ಲ.

6. ಭೂ ಮಾಲೀಕರ ಜೊತೆ ಸರ್ಕಾರ ಒಪ್ಪಂದ ಮಾಡಿಕೊಂಡು ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಬಹುದಾಗಿದೆ. ಇಂತಹ ವ್ಯವಸ್ಥೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯಿದೆಯಲ್ಲಿಯೂ ಇರುತ್ತದೆ.

7. ಮೂಲ ಭೂ ಸ್ವಾಧೀನ ಕಾಯಿದೆಗೆ ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು, ಗುಜರಾತ್ ಮತ್ತು ಜಾರಖಂಡ್ ರಾಜ್ಯಗಳು ಸಹ ಇದೇ ರೀತಿಯ ತಿದ್ದುಪಡಿಗಳನ್ನು ತಂದಿವೆ.

8. ಈ ತಿದ್ದುಪಡಿಯ ಮೂಲ ಆಶಯವು ಸರ್ಕಾರದ ವಿವಿಧ ಮೂಲ ಸೌಕರ್ಯ, ನೀರಾವರಿ, ಕುಡಿಯುವ ನೀರು, ವಿದ್ಯುತ್ತೀಕರಣ ಹಾಗೂ ಖಾಸಗಿ ಪಾಲುದಾರಿಕೆಯಡಿಯಲ್ಲಿ (ಭೂಮಿಯ ಒಡೆತನವು ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡಿರುವುದು ಮುಂದುವರಿಯುವ) ಕೈಗೊಳ್ಳುವ ಮಹತ್ವಾಕಾಂಕ್ಷೆಯ ಯೋಜನೆಗಳ ಭೂ ಸ್ವಾಧೀನ ಪ್ರಕ್ರಿಯೆಯನ್ನು ಯಾವುದೇ ವಿಳಂಬವಾಗದಂತೆ ತ್ವರಿತವಾಗಿ ಕೈಗೊಂಡು ರೈತರಿಗೆ ಅನುಕೂಲ ಮಾಡಿಕೊಡುವುದಾಗಿರುತ್ತದೆ. ಇದರಿಂದ ಭೂ ಮಾಲೀಕರಿಗೆ ಹೆಚ್ಚಿನ ಉಪಯೋಗವಾಗಲಿದ್ದು, ಅವರಿಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.